# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- "ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಹಾಗೂ (ತಿದ್ದುಪಡಿ) ಅಧಿನಿಯಮ, 2014"ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸಕಾಲ ಮಿಷನ್‌ಗೆ ಮೂವರು ಡಾಟಾ ಎಂಟ್ರಿ ಆಪರೇಟರ್‌ರನ್ನು ಕಿಯೋನಿಕ್ಸ್ ಮುಖಾಂತರ ಹೊರ ಗುತ್ತಿಗೆ ಆಧಾರದ ಮೇಲೆ ನಿಯೋಜಿಸಿ ವೇತನ ಪಾವತಿಸುವ ಬಗ್ಗೆ.

ಓದಲಾಗಿದೆ :

01. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 20 ಇಕಾಅ 2012, ದಿನಾಂಕ: 06-03-2012
02. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 28 ಇಕಾಅ 2012, ದಿನಾಂಕ:28-03-2012
03. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 186 Exp.12/2013, Dated:28-03-2013
04. ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 12 ನಾಸೇಖಾ 2016 (ಭಾಗ-1), ದಿನಾಂಕ:13.07.2017.
05. ಸರ್ಕಾರದ ಪತ್ರ ಸಂಖ್ಯೆ:-ಸಿಆಸುಇ 46 ನಾಸೇಖಾ 2015, ದಿನಾಂಕ:-07.08.2017 & 24.10.2017.
06. ಕಿಯೋನಿಕ್ಸ್ ಸಂಸ್ಥೆಯ ಪತ್ರ ಸಂಖ್ಯೆ: KSEDC/HR/DPAR-Sakala/2017-18, ದಿನಾಂಕ:08.08.2017, 15.11.2017 & 24.11.2017.
07. ಸರ್ಕಾರದ ಆದೇಶ ಸಂಖ್ಯೆ:-ಸಿಆಸುಇ 46 ನಾಸೇಖಾ 2015(ಭಾಗ-1), ದಿನಾಂಕ:-05.12.2017.
08. ಸರ್ಕಾರದ ಪತ್ರ ಸಂಖ್ಯೆ:-ಸಿಆಸುಇ 198 ನಾಸೇಖಾ 2017, ದಿನಾಂಕ:-21.03.2018.

ಪ್ರಸ್ತಾವನೆ :

ಮೇಲೆ ಓದಲಾದ (1) ರ ಸರ್ಕಾರದ ಆದೇಶದಲ್ಲಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ 2011ನ್ನು ಅನುಷ್ಠಾನಗೊಳಿಸಲು ಮಿಷನ್ ಮೋಡ್‌ನಲ್ಲಿ ಸಕಾಲ ಮಂಡಳಿಯನ್ನು ರಚಿಸಲಾಗಿದೆ.

ಮೇಲೆ ಓದಲಾದ (2) ರ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರವು 11 ಇಲಾಖೆಗಳ ಮುಖಾಂತರ 151 ಕಾಲಮಿತಿ ಸೇವೆಗಳನ್ನು ಕರ್ನಾಟಕ ನಾಗರೀಕರಿಗೆ ಒದಗಿಸಲು ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011ನ್ನು ದಿನಾಂಕ:02/04/2012 ರಿಂದ ರಾಜ್ಯಾದ್ಯಂತ ಅನುಷ್ಠಾನಗೊಳಿಸಲಾಗಿದೆ.

ಮೇಲೆ ಓದಲಾದ (3)ರ ಆರ್ಥಿಕ ಇಲಾಖೆಯ ಟಿಪ್ಪಣಿಯಲ್ಲಿ ಕೆ.ಟಿ.ಟಿ.ಪಿ ಆಕ್ಟ್‌ನ ಸೆಕ್ಷನ್ 4(ಜಿ)ರ ಪ್ರಕಾರ ಕಿಯೋನಿಕ್ಸ್ ಸಂಸ್ಥೆಯು ವಿನಾಯತಿ ಹೊಂದಿರುವುದರಿಂದ, ಎಲ್ಲಾ ಹೊರಗುತ್ತಿಗೆ ನೇಮಕಾತಿಯನ್ನು ಕಿಯೋನಿಕ್ಸ್ ಸಂಸ್ಥೆಯ ಮುಖಾಂತರ ಮಾಡುವಂತೆ ಸೂಚಿಸಿದೆ. ಅದರಂತೆ ಕಿಯೋನಿಕ್ಸ್ ಸಂಸ್ಥೆಯಿಂದ ಕೊಟೇಶನ್‌ನನ್ನು ಆಹ್ವಾನಿಸಿದ್ದು ಹೊರಗುತ್ತಿಗೆಯಡಿ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ನೇಮಕಾತಿ ಮಾಡಲಾಗುತ್ತಿದೆ.

ಮೇಲೆ ಓದಲಾದ (4)ರಲ್ಲಿನ ಸರ್ಕಾರದ ಆದೇಶದಲ್ಲಿ ಸಕಾಲ ಮಿಷನ್‌ನಡಿ ಒಟ್ಟು 50 ಹುದ್ದೆಗಳನ್ನು ಆಯಾ ಹುದ್ದೆಗಳ ಕಾರ್ಯಾವಧಿಯ ಮುಕ್ತಾಯದಿಂದ ಒಂದು ವರ್ಷದವರೆಗೆ ಮುಂದುವರೆಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ (5)ರ ಸರ್ಕಾರದ ಪತ್ರಗಳಲ್ಲಿ ಸಕಾಲ ಮಿಷನ್‌ನಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಹೊಸದಾಗಿ ಮೂವರು ದತ್ತಾಂಶ ನಮೂದಕರನ್ನು ಹೊರಗುತ್ತಿಗೆ ಆಧಾರದಲ್ಲಿ ನಿಯೋಜಿಸಿ ಕೊಡುವಂತೆ ಕಿಯೋನಿಕ್ಸ್ ಸಂಸ್ಥೆಗೆ ಪತ್ರ ಬರೆಯಲಾಗಿತ್ತು.

ಮೇಲೆ ಓದಲಾದ (6)ರಲ್ಲಿನ ಕಿಯೋನಿಕ್ಸ್ ಸಂಸ್ಥೆಯವರ ಪತ್ರಗಳಲ್ಲಿ ಶ್ರೀ ಅಲೆಕ್ಸಾಂಡರ್ ಡೇವಿಡ್, ಶ್ರೀ ವೇಣುಗೋಪಾಲ್ ಹಾಗೂ ಶ್ರೀಮತಿ ಎಲಿಯಮ್ಮರವರನ್ನು ಸಕಾಲ ಮಿಷನ್‌ಗೆ ದತ್ತಾಂಶ ನಮೂದಕರಾಗಿ ಕೆಲವೊಂದು ಷರತ್ತು ಮತ್ತು ನಿಬಂಧನೆಗಳೊಂದಿಗೆ ನಿಯೋಜಿಸಿ ಪತ್ರವನ್ನು ಕಳುಹಿಸಿರುತ್ತಾರೆ.

ಮೇಲೆ ಓದಲಾದ (7)ರಲ್ಲಿ ಸರ್ಕಾರದ ಆದೇಶದಲ್ಲಿ ದತ್ತಾಂಶ ನಮೂದಕರಿಗೆ ಈ ಕೆಳಕಂಡ ಸಂಭಾವನೆಯನ್ನು ನಿಗಧಿಪಡಿಸಿ ಆದೇಶಿಸಿರುತ್ತಾರೆ.

| Remuneration Details for | Data Entry Operators |
|---|---|
| PARTICULARS | AMOUNT (in Rs) |
| Gross to Candidate | 15,495.00 |
| PF Employee Contribution @12 % | 1859.00 |
| ESI Employees Contribution @1.75% | 271.00 |
| Professional Tax | NA |
| Net Payable to candidate | 13,365.00 |
| Billing Amount to Dept | |
| Gross to Candidate | 15,495.00 |
| PF Employer Contribution @ 13.16% | 2,039.00 |
| ESI Employer Contribution @ 4.75% | 736.00 |
| Sub Total | 18,270.00 |
| Service Charges | 914.00 |
| Bill Before GST | 19,184.00 |
| GST @18% | 3,453.00 |
| Total Billing Amount | 22,637.00 |

--3

ಮೇಲೆ ಓದಲಾದ (8) ರಲ್ಲಿ ಸರ್ಕಾರದ ಪತ್ರದಲ್ಲಿ ದತ್ತಾಂಶ ನಮೂದಕರಾದ ಶ್ರೀ ಅಲೆಕ್ಸಾಂಡರ್ ಡೇವಿಡ್, ಶ್ರೀ ವೇಣುಗೋಪಾಲ್ ಹಾಗೂ ಶ್ರೀಮತಿ ಎಲಿಯಮ್ಮರವರನ್ನು ದಿನಾಂಕ:22-03-2018 ರಂದು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿದೆ, ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 198 ನಾಸೇಖಾ 2017**
**ಬೆಂಗಳೂರು, ದಿನಾಂಕ: 30ನೇ ಏಪ್ರಿಲ್ 2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಹಾಗೂ (ತಿದ್ದುಪಡಿ) ಅಧಿನಿಯಮ, 2014ರ ಪರಿಣಾಮಕಾರಿ ಅನುಷ್ಠಾನಕ್ಕಾಗಿ ರಚಿಸಿರುವ ಸಕಾಲ ಮಿಷನ್‌ಗೆ ಹೊರಗುತ್ತಿಗೆ ಆಧಾರದಲ್ಲಿ ಕಿಯೋನಿಕ್ಸ್ ಮುಖಾಂತರ ಪಡೆಯಲಾದ ಡಾಟಾ ಎಂಟ್ರಿ ಆಪರೇಟರ್‌ಗಳಿಗೆ ದಿನಾಂಕ:05.12.2017ರ ಸರ್ಕಾರದ ಆದೇಶದಲ್ಲಿ (ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 46 ನಾಸೇಖಾ 2015 (ಭಾಗ-1)). ನಮೂದಿಸಿರುವ ಎಲ್ಲಾ ವೆಚ್ಚಗಳನ್ನು ಒಳಗೊಂಡಂತೆ ಹಾಗೂ ಜಿ.ಎಸ್.ಟಿ. 18% ಸೇರಿಸಿ ರೂ.22,637/- (ರೂ.ಇಪ್ಪತ್ತೆರೆಡು ಸಾವಿರದ ಆರು ನೂರ ಮೂವತ್ತೇಳು ಮಾತ್ರ)ಗಳ ಸಂಭಾವನೆಯೊಂದಿಗೆ, ಕಿಯೋನಿಕ್ಸ್ ಸಂಸ್ಥೆಯಿಂದ ನಿಯೋಜಿಸಿರುವಂತೆ ಹೊರಗುತ್ತಿಗೆ ಆಧಾರದ ಮೇಲೆ ಸಕಾಲ ಮಿಷನ್‌ಗೆ ನೇಮಿಸಲಾಗಿದ್ದು, ದಿನಾಂಕ:22-03-2018ರಂದು ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ. ಸದರಿಯವರನ್ನು ನೇಮಿಸಿದ ದಿನಾಂಕದಿಂದ ಬಿಡುಗಡೆಗೊಳಿಸಿದ ದಿನಾಂಕದವರೆಗೆ ವೇತನ ಪಾವತಿಸಲು ಸರ್ಕಾರದ ಮಂಜೂರಾತಿ ನೀಡಿದೆ.

| ಕ್ರ ಸಂ. | ಹೆಸರು | ಹುದ್ದೆ | ನೇಮಿಸಲಾದ ದಿನಾಂಕ | ಬಿಡುಗಡೆಗೊಳಿಸಲಾದ ದಿನಾಂಕ |
|---|---|---|---|---|
| 1 | ಶ್ರೀ ಅಲೆಕ್ಸಾಂಡರ್ ಡೇವಿಡ್ | ಡಾಟಾ ಎಂಟ್ರಿ ಆಪರೇಟರ್/ಸಹಾಯಕರು | 08.08.2017 | 22-03-2018 |
| 2 | ಶ್ರೀ ವೇಣುಗೋಪಾಲ್.ಆರ್. | ಡಾಟಾ ಎಂಟ್ರಿ ಆಪರೇಟರ್/ಸಹಾಯಕರು | 15.11.2017 | 22-03-2018 |
| 3 | ಶ್ರೀಮತಿ ಎಲಿಯಮ್ಮ | ಡಾಟಾ ಎಂಟ್ರಿ ಆಪರೇಟರ್/ಸಹಾಯಕರು | 24.11.2017 | 22-03-2018 |

ನೇಮಕಾತಿಯ ಷರತ್ತು ಮತ್ತು ನಿಬಂದನೆಗಳು.

01.ಗುತ್ತಿಗೆ ನೇಮಕಾತಿ ಅವಧಿಯು ಅವರು ಕಾರ್ಯಭಾರ ವಹಿಸಿಕೊಂಡ ದಿನದಿಂದ 1 ವರ್ಷದ ಅವಧಿಗೆ ಅಥವಾ ಮುಂದಿನ ಆದೇಶ ಹೊರಡಿಸುವವರೆಗೆ, ಇವೆರಡರಲ್ಲಿ ಯಾವುದು ಮೊದಲು ಸಂಭವಿಸುವುದೋ ಅಲ್ಲಿಯವರೆಗೆ ಮಾತ್ರ ಇದ್ದು, ಇದೊಂದು ತಾತ್ಕಾಲಿಕ ನೇಮಕಾತಿ ಆಗಿರುತ್ತದೆ.

02.ಈ ಒಪ್ಪಂದ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ, ಗುತ್ತಿಗೆ ನೇಮಕಾತಿಯು ತಾನಾಗಿಯೇ ಮುಕ್ತಾಯವಾಗುತ್ತದೆ.

409



03.ಸದರಿ ಗುತ್ತಿಗೆ ನೌಕರರು ವಾರ್ಷಿಕ 12 ದಿನಗಳು ಸಾಂಧರ್ಭಿಕ ರಜೆ ಪಡೆಯಲು ಅರ್ಹರಾಗಿರುತ್ತಾರೆ

04.ಅವರು ಕರ್ತವ್ಯ, ಮತ್ತು ಕಾರ್ಯಗಳನ್ನು ಆಸಕ್ತಿಯಿಂದ ನೆರವೇರಿಸುವುದು ಅವರು ಕರ್ತವ್ಯವನ್ನು ಪಾಲಿಸುತ್ತಿರುವಾಗ ಅಥವಾ ನೆರವೇರಿಸುತ್ತಿರುವಾಗ ಅವರಿಗೆ ಲಭ್ಯವಾಗಬಹುದಾದ ಅಥವಾ ದೊರಕಬಹುದಾದ ಅನಧಿಕೃತ ಮಾಹಿತಿಯನ್ನು ಗೌಪ್ಯವಾಗಿಟ್ಟು ಕಟ್ಟುನಿಟ್ಟಾಗಿ ಪಾಲಿಸಬೇಕು.

05.ಸದರಿ ನೇಮಕಾತಿ ಅವಧಿಯ ಸೇವೆಯನ್ನು ನಿವೃತ್ತಿ ವೇತನ ಹಾಗೂ ಇತ್ಯಾದಿ ಸೌಲಭ್ಯಗಳಿಗೆ ಅರ್ಹತಾದಾಯಕ ಸೇವೆಯೆಂದು ಪರಿಗಣಿಸುವುದಿಲ್ಲ/ಸದರಿ ಗುತ್ತಿಗೆ ನೇಮಕಾತಿಯನ್ನು ಯಾವುದೇ ಕಾರಣಕ್ಕೂ ಖಾಯಂ ಎಂದು ಪರಿಗಣಿಸುವುದಿಲ್ಲ.

06.ಸದರಿ ಗುತ್ತಿಗೆ ನೌಕರರು ಸರ್ಕಾರಿ ವಿರೋಧಿಯಾದ ಯಾವುದೇ ಕೆಲಸವನ್ನು ನಿರ್ವಹಿಸುವಂತಿಲ್ಲ.

07.ಒಪ್ಪಂದದ ಷರತ್ತು ಮತ್ತು ನಿಬಂಧನೆಗಳಲ್ಲಿ ನೀಡಿರುವ ಸೌಲಭ್ಯಗಳ ಹೊರತಾಗಿ ಬೇರಾವುದೇ ಸೌಲಭ್ಯಕ್ಕೆ ಅಂದರೆ ಹುದ್ದೆಯಲ್ಲಿ ವೇತನ ಬಡ್ತಿ, ಪದೋನ್ನತಿ, ಸಕ್ರಮಗೊಳಿಸುವುದು, ಪಿಂಚಣಿ ಇತ್ಯಾದಿ ಸೌಲಭ್ಯಗಳಿಗೆ ಅನರ್ಹರಾಗಿರುತ್ತಾರೆ.

08.ಅವರ ದುರ್ನಡತೆಯಿಂದಾಗಲಿ ಅಥವಾ ನಿರ್ಲಕ್ಷ್ಯತೆ, ಉದಾಸೀನತೆಯಿಂದಾಗಲಿ ಸರ್ಕಾರಕ್ಕೆ ಸಂಬಂಧಿಸಿದಂತೆ ಆರ್ಥಿಕ ನಷ್ಟ ಉಂಟಾದರೆ, ಅದನ್ನು ಅವರು ಸರ್ಕಾರಕ್ಕೆ ತುಂಬಿಕೊಡಲು ಹೊಣೆಯಾಗಿರುತ್ತಾರೆ.

ಈ ಮೇಲಿನ ವೆಚ್ಚವನ್ನು 2018-19ನೇ ಸಾಲಿನ ಲೆಕ್ಕ ಶೀರ್ಷಿಕೆ 2052-00-090-0-26-051ರ ಅಡಿಯಲ್ಲಿ ಕರ್ನಾಟಕ ಸಕಾಲ ಸೇವೆಗಳ ಅಧಿನಿಯಮ, 2011 ಹಾಗೂ (ತಿದ್ದುಪಡಿ) ಅಧಿನಿಯಮ, 2014ರ ಅನುಷ್ಠಾನದಲ್ಲಿ ಭರಿಸಲಾಗುವುದು.

ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 02 ಟಿಎಫ್‌ಪಿ 2018, ಬೆಂಗಳೂರು, ದಿನಾಂಕ:03-04-2018ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಈ ಅದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಕೆ. ಮಥಾಯಿ ಕ.ಆ.ಸೇ.,)
"ಆಡಳಿತಾಧಿಕಾರಿ,
ಸಕಾಲ ಮಿಷನ್,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸಕಾಲ)."

ಇವರಿಗೆ :

01. ಕರ್ನಾಟಕ ಮಹಾಲೇಖಪಾಲರು, (ಲೆಕ್ಕಪತ್ರ)/(ಎ ಮತ್ತು ಇ), ಕರ್ನಾಟಕ, ಬೆಂಗಳೂರು.
02. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಬಿ ಅಂಡ್ ಆರ್), ವಿಧಾನ ಸೌಧ, ಬೆಂಗಳೂರು.

03. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಸಂಗ್ರಹಣಾ ಕೋಶ),ವಿಧಾನ ಸೌಧ, ಬೆಂಗಳೂರು.
04. ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು.
05. ಜಂಟಿ ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
06. ಉಪ ನಿರ್ದೇಶಕರು, ಟಿ.ಎನ್.ಎಂ.ಸಿ. ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
07. ವ್ಯವಸ್ಥಾಪಕ ನಿರ್ದೇಶಕರು, ಕಿಯೋನಿಕ್ಸ್ ಸಂಸ್ಥೆ, ಟಿ.ಟಿ.ಎಂ.ಸಿ ಕಟ್ಟಡ, ಶಾಂತಿನಗರ ಬೆಂಗಳೂರು-27.
08. ಮಿಷನ್ ನಿರ್ದೇಶಕರು, ಸಕಾಲ ಮಿಷನ್ ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ಸಿಆಸುಇ (ಇ-ಆಡಳಿತ) ಬಹುಮಹಡಿ ಕಟ್ಟಡ.
09. ಅಪರ ಮಿಷನ್ ನಿರ್ದೇಶಕರು, ಸಕಾಲ ಮಿಷನ್, ಸಿಆಸುಇ ರವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ.
10. ಲೆಕ್ಕಾಧೀಕ್ಷಕರು, ಸಕಾಲ ಮಿಷನ್, ಸಿಆಸುಇ (ಇ-ಆಡಳಿತ)-ಅಗತ್ಯ ಕ್ರಮಕ್ಕಾಗಿ.
11. ಸಂಬಂಧಪಟ್ಟ ನೌಕರರಿಗೆ/ಹೆಚ್ಚುವರಿ ಪ್ರತಿಗಳು/ಶಾಖಾ ರಕ್ಷಾ ಕಡತ.

Issued ...... Dated 2/5/18
D.P.A.R. (AR)